ನಾಗಬನದೆದುರಿದ್ದ ಪೇರಳೆಗಿಡಕ್ಕೆ ತೂಗುಬಿಟ್ಟಳು. ''ಮಾವಾ, ಇಲ್ಲಿ ನೋಡು'' ಎಂದು ಪೇರಳೆ ಗಿಡದಲ್ಲಿದ್ದ ಸೌತೆಕಾಯಿಯನ್ನು ಹಿಂದೆಮುಂದೆ ತೂಗಿದಳು. ''ಮಾವನಾ?'' ಎಂದು ನಾವು ಕೇಳಿದಾಗ, ''ಮತ್ತೇನು. ಅಮ್ಮ 'ಅಣ್ಣಾ' ಎಂದು ಬೇಡಿಕೊಂಡದ್ದಲ್ಲವೆ? ಅಮ್ಮನ ಅಣ್ಣ ನಮಗೆ ಮಾವ ಅಲ್ಲವೆ?'' ಎಂದಳು. ನಾವೆಲ್ಲ ಗಹಗಹಿಸಿ ನಕ್ಕಾಗ, ತೂಕಡಿಸುತ್ತಿದ್ದ ಹನುಮಂತರಾಯರು ಪೂರ್ಣ ಎಚ್ಚರಗೊಂಡರು. ಮೈಮುರಿದರು. ಸೌತೆ ಕಾಯಿಯನ್ನು ನೋಡಿದವರು ಮಲಗಿದಲ್ಲಿಂದ ನೇರ ಪೇರಳೆಗಿಡಕ್ಕೆ ಲಂಘನ ಮಾಡಿದರು. ಪೇರಳೆ ಗಿಡದ ಗೆಲ್ಲಿನ ಮೇಲೆ ಕುಳಿತು ಸೌತೆಕಾಯಿ ತಿನ್ನ ತೊಡಗಿದರು.

ಬಾಲ ತುಂಡಾದ ಗಾಯ ಮಾಯುವ ತನಕ ಅಮ್ಮ ಹನುಮಂತರಾಯರಿಗೆ ಮಕ್ಕಳಿಗೆ ಮಾಡಿದಷ್ಟೇ ಉಪಚಾರ ಮಾಡಿದಳು. ಮೊದಲು ದೂರದಿಂದ, ಮತ್ತೆ ಹತ್ತಿರದಿಂದ, ಕೊನೆಗೆ ಅವಳ ಮಡಿಲೇರಿ ಈ ಬಾಲವಿಲ್ಲದ ಹನುಮಂತರಾಯರು ಅಮ್ಮನ ಉಪಚಾರವನ್ನು ಸ್ವೀಕರಿಸತೊಡಗಿದರು. ಮತ್ತೆ ತಿಂಗಳೊಪ್ಪತ್ತರಲ್ಲಿ ನಾಗಬನ ಬಿಟ್ಟು, ಅಮ್ಮ ಕುಳಿತುಕೊಳ್ಳುತ್ತಿದ್ದ ಹೆಬ್ಬಾಗಿಲ ಜಗಲಿ, ಅವಳು ಅಡುಗೆ ಮಾಡುತ್ತಿರುವಾಗ ಅಡುಗೆಮನೆ ಕಿಟಕಿ, ದನಕರುಗಳ ಚಾಕರಿ ಮಾಡುತ್ತಿದ್ದರೆ ದೊಡ್ಡಕಡಸಿನ ಬೆನ್ನುಹತ್ತಿ ಕುಳಿತುಕೊಂಡು ತಕರಾರಿಲ್ಲದೇ ಅಮ್ಮನ ಮಾತು ಕೇಳತೊಡಗಿದರು. ಮಧ್ಯಾಹ್ನ ಊಟವಾದ ಮೇಲೆ ರುಮುರುಮು ಗಾಳಿ ಬೀಸುತ್ತಿದ್ದ ಹೆಬ್ಬಾಗಿಲ ಜಗುಲಿಯಲ್ಲಿ ಕುಳಿತು ಅಮ್ಮ ಕತೆ ಪುಸ್ತಕ ಓದುತ್ತಿದ್ದರೆ, ಈ ಹನುಮಂತರಾಯರು ಅವಳ ಕಾಲಬುಡದಲ್ಲಿ ಕುಳಿತು ತೂಕಡಿಸುತ್ತಿದ್ದರು.

ಈ ಮಂಗಣ್ಣನಿಗೆ ಏನಾದರೊಂದು ಒಳ್ಳೆಯ ಹೆಸರಿಡಬೇಕಲ್ಲಾ ಎಂದಳು ನಮ್ಮಕ್ಕ. 'ಏನಾದರೂ ಒಳ್ಳೆಯ ಸಂಸ್ಕೃತ ಹೆಸರಿಡೋ' ಎಂದು ನನ್ನನ್ನೇ ಕೇಳಿಕೊಂಡಳು. ಆಗ ಹೈಸ್ಕೂಲು ಓದುತ್ತಿದ್ದ ನನ್ನ ಕನ್ನಡ ಪಠ್ಯದಲ್ಲಿ ಯಾವುದೋ ಪಾಠದಲ್ಲಿ ಗೋಲಾಂಗೂಲ ಎನ್ನುವ ಪದವೊಂದಿತ್ತು. ನಮ್ಮ ಕನ್ನಡ ಅಧ್ಯಾಪಕರು ಅದರ ಅರ್ಥವನ್ನು ಹೇಳುತ್ತಾ ''ಗೋವಿನ ಲಾಂಗೂಲದಂತಹ ಲಾಂಗೂಲ ಉಳ್ಳದ್ದು. ಎಂದರೆ ದನದ ಬಾಲದಂತಹ ಬಾಲ ಹೊಂದಿರುವ ಪ್ರಾಣಿ. ಮಂಗ'' ಎಂದು ವಿವರಿಸಿದ್ದರು. ಈಗ ಈ ಬಾಲವಿಲ್ಲದ ಮಂಗಕ್ಕೊಂದು ಹೆಸರಿಡಬೇಕಾಗಿ ಬಂದಾಗ, 'ನಮ್ಮದು ಹೇಗಿದ್ದರೂ ಆಚಾರ್ಯರ ಮನೆ. ಇದೂ ನಮ್ಮ ಕುಟುಂಬದ ಸದಸ್ಯ ಎಂದಾದ ಮೇಲೆ ಲಾಂಗೂಲಾಚಾರ್ಯ ಎಂಬ ಹೆಸರೇ ಆದೀತು' ಎಂದು ಸರ್ವಾನುಮತದಿಂದ ನಿರ್ಣಯಿಸಿಬಿಟ್ಟೆವು.

ಈ ವಿಷಯ ಕನ್ನಡ ಪಂಡಿತರಾಗಿದ್ದ ನಮ್ಮ ಮಾವನವರಿಗೆ ತಿಳಿದು ಅವರು ''ಲಾಂಗೂಲಾಚಾರ್ಯರೆಂದರೆ ಎಷ್ಟುದೊಡ್ಡ ವಿದ್ವಾಂಸರು ಗೊತ್ತಾ. ಅವರ ಹೆಸರನ್ನು ಮಂಗಕ್ಕೆ, ಅದೂ ಬಾಲವಿಲ್ಲದ ಮಂಗಕ್ಕೆ ಇಡ್ತೀರಾ. ಅದರ ಬದಲು ಅದಕ್ಕೆ ನಿಮ್ಮದೇ ಹೆಸರು ಇಟ್ಟುಕೊಳ್ಳಿ. ಹೇಗಿದ್ದರೂ ನೀವಿಬ್ಬರು ಬಾಲವಿಲ್ಲದ ಮಂಗಗಳು'' ಎಂದು ವಾಚಾಮಗೋಚರವಾಗಿ ಬೈದರು. ಮತ್ತೆ ನಾವೆಲ್ಲಾ ಸೇರಿ, ಈ ಮಂಗಕ್ಕೆ ಸಂಸ್ಕೃತ ಹೆಸರು ಬೇಡ, ಶುದ್ಧಕನ್ನಡದಲ್ಲೇ ಹೆಸರಿಡುವ ಎಂದು ಆಲೋಚಿಸಿದೆವು. ಕೊನೆಗೆ ಬಾಲವಿಲ್ಲದ ಮಂಗ ಎಂಬೆರಡು ಪದಗಳಿಂದ ಮೊದಲ ಅಕ್ಷರ ಆಯ್ಕೆಮಾಡಿಕೊಂಡು, ನಮ್ಮ ಕುಲನಾಮ ಸೇರಿಸಿ ಭಾಮಾಚಾರ್ಯ ಎಂದು ಕರೆದೆವು.

ಇದಕ್ಕೂ ನಮ್ಮ ಮಾವ ತಕರಾರೆತ್ತಿದರು. ''ಭಾಮಾಚಾರ್ಯ. ಯಾವ ಸಂಧಿ?'' ಎಂದು ಪ್ರಶ್ನಿಸಿದರು. ನಮಗೂ ತಲೆಬಿಸಿಯಾಯಿತು. ಸವರ್ಣದೀರ್ಘ ಸಂಧಿ ಎಂದರೆ ಅವರ ತಕರಾರು ಇದ್ದೇ ಇರುತ್ತೆ. ಲೋಪಸಂಧಿ ಎನ್ನೋಣವೆ? ಪಂಡಿತರ ಮನೆಯಲ್ಲಿ ಹುಟ್ಟಬಾರದು ಎಂದು ನಾನು ಹಳಹಳಿಸುತ್ತಿರುವಾಗಲೇ, ನಮ್ಮಕ್ಕ ಬಾಲವಿಲ್ಲದ ಮಂಗಕ್ಕೆ ಮಹಾಪ್ರಾಣವಿತ್ತು, ಸವರ್ಣದೀರ್ಘ ಸಂಧಿಯ

